# ಇನ್ನಾದರು ನಿನಗೆ ನೀನು ತಿಳಿಯದೆ ಇಂಥ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 67.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ಪುನ್ನಾಗವರಾಳಿ ತಾಳ: ಝಂಪೆ

ಇನ್ನಾದರು ನಿನಗೆ ನೀನು ತಿಳಿಯದೆ ಇಂಥ
ಅನ್ಯಾಯವುಂಟೆ ಪೇಳೊ ಆತ್ಮ || ಪ ||

ಚೆನ್ನಾಗಿ ಕಂಡು ತಿಳಿದು ಚರಿಸುವರೆ ತಿರುಗಿ ತಿರುಗಿ
ಬಿನ್ನಾಣ ಬೇಡ ಕಂಡ್ಯ ಆತ್ಮ || ಅಪ ||

ಎಷ್ಟು ಜನ್ಮವ ಪಡೆದೆ ಎಷ್ಟು ಬಸಿರಲಿ ಬಂದೆ
ಎಷ್ಟು ತನುವಾಗಿ ಬೆಳೆದೆ ಆತ್ಮ
ಎಷ್ಟು ಮೊಲೆ ಪಾಲುಂಡೆ ಎಷ್ಟು ದೇಶದಲಿದ್ದೆ
ಎಷ್ಟು ಸತಿಸುತರ ಪಡೆದೆ ಆತ್ಮ
ಎಷ್ಟು ಶಿಶುವೆಂದೆನಿಸಿಕೊಂಡು ಮೆರೆದೆ
ಎಷ್ಟು ಬನ್ನವ ತಾಳಿದೆ ಆತ್ಮ
ಎಷ್ಟು ಬಂಧುಗಳೊಡನೆ ಎಲ್ಲೆಲ್ಲಿ ಬಂದು ಬೆರೆದೆ
ಎಷ್ಟು ಗುಣದವರ ನೋಡೊ ಆತ್ಮ || 1 ||

ಎಲುವುಗಳನು ಕಡೆದು ಎಂಭತ್ತನಾಲ್ಕು ಕೀಲುಗಳು
ಬಲು ನರಂಗಳಲಿ ಬಿಗಿದು ಆತ್ಮ

ನೆಲೆ ರಕ್ತ ಮಾಂಸದಲಿ ನೆರಹಿ ಚರ್ಮವ ತೊಡಿಸಿ
ಬಲು ಬೊಂಬೆಯಾದೆಯಲ್ಲೊ ಆತ್ಮ
ಮಲಮೂತ್ರ ಪೂಜಿತದ ಮನೆಬಾ-
ಗಿಲೊಂಭತ್ತು ಬಳಿಕ ಕೊಂಡಿಪ್ಪೆಯಲ್ಲೊ ಆತ್ಮ
ಬಲವಂತನೆನಿಸುವರು ಪಂಚಭೂತಗಳಿಂದ
ಬೆಲೆಗೈವ ದೇಹ ಕಂಡ್ಯಾ ಆತ್ಮ || 2 ||

ಮೂವನೆರದ ಭಂಡಿ ಹೊಲನ್ಯಾರದೆಂಬುವುದು
ಮೂರು ಗುಣದವರ ನೋಡೊ ಆತ್ಮ
ತಾವರದ ಅಷ್ಟ ಮದ ಜವಿಯಲಿ ಪೋಪುವದು
ಭಾವದವರ ನೋಡೊ ಆತ್ಮ
ಭಾವರದ ಷಡ್ವರ್ಗ ಘಾತಕ ಕೊಂಪೆಯಿದು
ತಾವೆನಿಸಿಕೊಂಬುವುದಲ್ಲೋ ಆತ್ಮ
ಭಾವಜನ ಕಲೆ ನೆಲೆಯ ಬಿಟ್ಟರು
ಹದಿನಾರು ಮಂದಿ ಪಾರಿಯಾರಿರರು ಕಂಡ್ಯಾ ಆತ್ಮ || 3 ||

ಆಡಿ ತಪ್ಪಲು ಬೇಡ, ನೋಡಿ ಕೊಡದಿರಬೇಡ
ಬೇಡಿದರೆ ಕಾಡಬೇಡ ಆತ್ಮ
ಚಾಡಿಚುಡಿತಗಳಾಡಿ ಸಲೆ ಪಂಥಗಳನಾಡಿ
ಕೆಡುಕ ನೀನಾಗಬೇಡ ಆತ್ಮ
ಆಡಿ ಹಲವರ ಜರೆದು , ಹಗರಣಕೆ ಗುರಿಮಾಡಿ
ಆಡಿ ಹಮ್ಮಿಸಬೇಡ ಆತ್ಮ
ನೆಡಿಗಂಡದಿನನಾಗಿ ನಂಬಿದರೆ ಸಲಹನೇ
ನರಕರುಹನಾಗಬೇಡ ಆತ್ಮ || 4 ||

ನೆಚ್ಚದಿರು ಈ ಒಡಲ, ನೆಚ್ಚದಿರು ಈ ದೋರ್ಬಲವ
ನೆಚ್ಚದಿರು ಈ ಸಿರಿಯನು ಆತ್ಮ
ಹೆಚ್ಚದಿರು ಉಬ್ಬಿನಲಿ ಹೆಚ್ಚದಿರು ಕೊಬ್ಬಿನಲಿ
ಹೆಚ್ಚದಿರು ಕ್ರೂರದಲಿ ಆತ್ಮ
ಕಚ್ಚದಿರು ಎಲ್ಲರಲಿ, ಕಚ್ಚದಿರು ಬಲ್ಲರಲಿ
ಕಚ್ಚದಿರು ಶ್ವಾನನಂತೆ ಆತ್ಮ
ಬೆಚ್ಚದಿರು ದೃಢದಲ್ಲಿ, ಬೆಚ್ಚದಿಂದ್ರಿಯಗಳಲಿ

ಬೆಚ್ಚದಿರು ಚಿತ್ತದಲ್ಲಿ ಆತ್ಮ     || 5 ||

ವೇದ ಶ್ರುತಿಗಳ ಕೇಳು, ಓದು ರಾಮಾಯಣವ
ಭೇದಿಸು ಭಾಷಿತವನು ಆತ್ಮ
ಆದಿ ಗುರುಹಿರಿಯರಲ್ಲಿ ಅಧಿಕ ಬುದ್ಧಿಯ ಕೊಡು
ಆಗಮವ ತಿಳಿದು ಬಾಳು ಆತ್ಮ
ಕದ್ದ ಕಳ್ಳನ ಹಿಡಿವ ಕಪಟ ಕಾಮನ ಗೆಲಿವ
ಕಾಯಕದ ಚಿಂತೆ ಮಾಡು ಆತ್ಮ
ಕಾದ ಹಾಲಿನ ತೆರದಿ ಕಲ್ಮಷವ ಕಳೆದು
ಉಪಕಾರಿ ಜೀವನಾಗೊ ಆತ್ಮ     || 6 ||

ದೇಶ ಮೋಹ ಚಿಂತನೆಯ ವಶವೃತ್ತಿಯೊಳಗಾಗಿ
ಅಸುರ ನೀನಾಗಬೇಡ ಆತ್ಮ
ಶಶಿಮುಖಿಯರೆನಿಪ ಪರಸ್ತ್ರೀಯರಲಿ ಕಣ್ಣಿಟ್ಟು
ಪಶು-ಪಕ್ಷಿ ಆಗಬೇಡ ಆತ್ಮ
ಪುಸಿಯ ಸಂಸಾರ ಸಂಭೋಗದತಿಶಯದ ಕೊಬ್ಬಿನಲಿ
ನೀ ಸದಾ ದೀನನಾಗಬೇಡ ಆತ್ಮ
ಹಸನಾದ ನರಜನ್ಮ ಹಲವು ಜನ್ಮದಿ ಜನಿಸಿ
ದೆಸೆಗೆಟ್ಟು ತಿರುಗಬೇಡ ಆತ್ಮ     || 7 ||

ಸತ್ಯವೆಂಬದು ದೊಡ್ಡ ಸಾಮ್ರಾಜ್ಯ ಪದವಿಯಲಿ
ನಿತ್ಯ ಓಲಗವ ಮಾಡೊ ಆತ್ಮ
ಅತ್ಯಧಿಕ ಫಲವೀವ ಅನ್ನದಾನಗಳಲ್ಲಿ
ಮೃತ್ಯು ಭಯವೆಲ್ಲ ನೂಕೊ ಆತ್ಮ
ಮುತ್ತು ಇಲ್ಲದ ರತ್ನ ಮೂರಂತರಂಗದಲಿ
ಮೂವ್ವದೊಡೆಯನ ಪೂಜಿಸೋ ಆತ್ಮ
ಕತ್ತಲೆಯ ಕಳೆಕಳೆದು ಘನ ಪಾಪಗಳನೆಲ್ಲ-
ನೊತ್ತಿ ನಿಜಬೆಳಕ ನೋಡೊ ಆತ್ಮ     || 8 ||

ಕುಲಗೋತ್ರವೊಂದಾಗೊ ನೆಲಸೂತ್ರನೊಂದಾಗೊ
ಸಲಹು ಗುಣಸಾಂದ್ರನಾಗೊ ಆತ್ಮ
ಬಲು ಶೂರ ನೀನಾಗೊ ಭಾಗವತ ನೀನಾಗೊ

ಪರಮ ಪುಣ್ಯಾತ್ಮನಾಗೊ ಆತ್ಮ
ಚೆಲುವ ಗುರು ಮಧ್ವಪತಿ ಶ್ರೀಲಕ್ಷ್ಮಿ ಕೃಪೆಯಿಂದ
ಪಾವನದ ಶೀಲನಾಗೊ ಆತ್ಮ
ಇಳೆಯೊಳಗೆ ಪುರಂದರ ವಿಠಲನಂಘ್ರಿಗಳ ಭಜಿಸಿ
ಎಡೆಬಿಡದೆ ದಾಸನಾಗೊ ಆತ್ಮ || 9 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನೆರಹು** = ಕೂಡಿಸು ಸೇರಿಸು ಜೊತೆಗೂಡಿಸು

**ನರಕ ರುಹನಾಗಬೇಡ** = ನರಕದಲ್ಲಿ ಹುಟ್ಟಿದವನಾಗ ಬೇಡ

**ಪಾರಿಯಾರಿರರು** = ಪಹರೆಗೆ, ಕಾವಲಿಗೆ ಯಾರು ಇರುವರು?

**ಜವಿಯಲಿ** = ವೇಗವಾಗಿ, ತ್ವರೆಯಿಂದ

**Classification:** Mundige
**Ankita:** purandara vittala
**Location:** NA
**Category:** Buddi Matu, Mukti marga, virakti, Jeevanoddhara,
**Sub-Category:** Krishna, patni, putra, hennu, papa, karma, samsara, Samudra, bhava, mukti,
**Pravachana:** NA
**Explanation:** Dr. Anantha Rao Dandin, Bengaluru.